# ಪರಿಣಯ – ಪ್ರಣಯ

ನಿನ್ನೆ ಟೀವಿಯಲ್ಲಿ ‘ಪರಿಣೀತ’ ಚಿತ್ರದ ಆಡ್ ನೋಡ್ತಾ ಇದ್ದಾಗ ನೆನಪಿಗೆ ಬಂದದ್ದು ಇಷ್ಟು:
‘ಪರಿಣೀತ’ (ಪರಿಣಿತ ಅಲ್ಲ) ಸುಪ್ರಸಿದ್ಧ ಬಂಗಾಲಿ ಲೇಖಕ ಶರಚ್ಚಂದ್ರ ಚಟ್ಟೋಪಾಧ್ಯಾಯರ ಒಂದು ಕಾದಂಬರಿ. ಹಿಂದಿ ಚಿತ್ರರಂಗದವರಿಗೆ ಈಗೀಗ ಹಳೆಯ ಕಾದಂಬರಿಗಳನ್ನೂ, ಬೇರೆ ಬೇರೆ ಭಾಷೆಯ ಹಳೆಯ ಚಿತ್ರಗಳನ್ನೂ ಹಿಂದಿಗೆ ತರುವ ತಲುಬು ಹತ್ತಿಕೊಂಡಿದೆ. ‘ಮುಘಲ್–ಎ–ಆಜಂ’ ಆಯ್ತು, ‘ದೇವದಾಸ್’ ಆಯ್ತು, ಐಶ್ವರ್ಯಾಳ ‘ಛೊಕರ್ ಬಾಲಿ’ ಬರ್ರೋಕಿದೆ, ಈವಾಗ ‘ಪರಿಣೀತ’. (ದೇವದಾಸ್ ನೋಡಿ ಹೆದರಿದವರೆಲ್ಲ ‘ಪರಿಣೀತ’ಕ್ಕೆ ನಿರ್ಭಯವಾಗಿ ಹೋಗಬಹುದು, ಯಾಕೆಂದರೆ ಇದರಲ್ಲಿ ಶಾರೂಕ್ ಮತ್ತು ಸಂಜಯ್ ಲೀಲಾ ಇಬ್ಬರೂ ಇನ್ವಾಲ್ವ್ ಆಗಿಲ್ಲ!)

‘ಪರಿಣೀತ’ ಅಂದರೆ ‘ಮದುವೆಯಾದವಳು’ ಅಂತ. ‘ಪರಿಣಯ’ ಇದರ ಮೂಲ ಪದ. ‘ಪರಿಣಯ’ದ ಅರ್ಥ ‘ಮದುವೆ’. (ಸುಭಧ್ರಾ ಪರಿಣಯ ನಾಟಕ ಗೊತ್ತಲ್ಲ?). ಪ್ರಣಯಕ್ಕೂ ಪರಿಣಯಕ್ಕೂ ಬಹಳ ಹತ್ತಿರದ ಸಂಬಂಧ ಇದೆ (ಅಥವಾ ‘ಇತ್ತು’). ಪ್ರಣಯಕ್ಕೂ ಮೂಲಪದ ಪರಿಣಯವೋ ಗೊತ್ತಿಲ್ಲ. ಆದರೆ ಹಿಂದೆಲ್ಲ ಪ್ರಣಯಕ್ಕೆ ಪರಿಣಯವೇ ಮೂಲವಾಗಿತ್ತು. ಆವಾಗಲೆಲ್ಲ ಮೊದಲು ‘ಪರಿಚಯ’, ಆಮೇಲೆ ‘ಪರಿಣಯ’ ತದನಂತರ ‘ಪ್ರಣಯ’. ಆದರೆ ಈಗೆಲ್ಲ ಮೊದಲು ‘ಪರಿಚಯ’, ಆಮೇಲೆ ‘ಪ್ರಣಯ’ ತದನಂತರ ಸಮಯವಿದ್ದರೆ ‘ಪರಿಣಯ’ ಇಲ್ಲದಿದ್ದರೆ ಇಲ್ಲ! ಕೆಲವೊಮ್ಮೆ ಇದರಲ್ಲಿ ಪರಿಚಯವೂ ಬೇಡ, ನೇರವಾಗಿ ಪ್ರಣಯಕ್ಕೇ ಹೋಗಬಹುದು (ಬ್ಲೈಂಡ್ ಡೇಟಿಂಗ್! ಪ್ರೀತಿ ಕುರುಡು ಅಂತ ಈಗ ತಿಳಿಯಿತೇ?).

ಪ್ರಣಯದಲ್ಲಿ ಪರಿಣತಿ (ಪರಿಣಿತಿ ಅಲ್ಲ) ಇದ್ದವರು ಮಾತ್ರ ಪರಿಣಯಕ್ಕೆ ತಲೆ ಒಡ್ಡಬಹುದೆಂದು ಹಿಂದಿನವರು ನಿಯಮಗಳನ್ನು ಮಾಡಿದ್ದರು ಅನಿಸುತ್ತೆ, ಅದಕ್ಕೇ ನಾವು ಪರಿಣತಿ, ಪರಿಣಯ ಬೇಡದ ಪ್ರಣಯಕ್ಕೆ ಹಾತೊರೆಯುವುದು (ಡೇಟಿಂಗ್, ಲಿವ್–ಇನ್ ಸಂಬಂಧಗಳು) ಈ ತಲೆಮಾರಿನ ನಮಗೆ ಹಳೆಯ ನಿಯಮಗಳ ಮುರಿವುದೇ ದೊಡ್ಡ ಕೆಲಸ!

ಇಷ್ಟು ಸಾಕು, ಬೆಳ್ಳಂಬೆಳಗ್ಗೆ ತಲೆ ತಿಂತಿದಾನೆ ಅಂತ ಬೈಕೋಬೇಡಿ, ‘ಹ್ಯಾವ್ ಎ ನೈಸ್ ಡೇ’!